<u>ಸಾಕ್ಷಿಯನ್ನು ದಿನಾಂಕಃ**31.01.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎನ್.ಎ. ವಕೀಲರಿಂದ:</u>

ಈ ದಾವೆಯನ್ನು ವಿಭಾಗ ಕೋರಿ ನನ್ನ ತಮ್ಮಂದಿರ ವಿರುದ್ಧ ಹೂಡಿರುತ್ತೇನೆ. ನನ್ನ ತಾತನ ಹೆಸರು ಬಜ್ಜೇಗೌಡ. ನನ್ನ ತಾತನಿಗೆ ನನ್ನ ತಂದೆ ಹಾಗೂ ರಾಮಣ್ಣ ಇಬ್ಬರೂ ಮಕ್ಕಳು. ನನ್ನ ತಾತ ಮರಣ ಹೊಂದಿ 10-12 ವರ್ಷಗಳಾಗಿರಬಹುದು. ನನ್ನ ತಂದೆ ಹಾಗೂ ಅವರ ಸಹೋದರ ನನ್ನ ತಾತ ಬದುವಿದ್ದಾಗಲೇ ವಿಭಾಗ ಆಗಿದ್ದರು. ಸದರಿ ವೇಳೆಗೆ ನನ್ನ ಅಜ್ಜಿ ಜೀವಿತವಿರಲಿಲ್ಲ. ಸದರಿ ವಿಭಾಗದಲ್ಲಿ ನನ್ನ ತಾತನವರಿಗೂ ಜೀವನಾಂಶಕ್ಕೆಂದು ಕೆಲವು ಆಸ್ತಿಗಳನ್ನು ನೀಡಲಾಗಿತ್ತು ಎಂದರೆ ಸರಿ. ಅವುಗಳೆಂದರೆ ಸರ್ವೇ ನಂ.12/1, ಹೊಸ ನಂ.12/6 ರಲ್ಲಿ ಆ ರೀತಿ ನೀಡಲಾಗಿತ್ತು ಎಂದರೆ ಸರಿ. ದಿನಾಂಕಃ10.12.1991 ರಲ್ಲಿ ನ್ನ ತಾತ ಅವರ ಜೀವಾನಂಶಕ್ಕೆಂದು ಬಿಟ್ಟು ಕೊಟ್ಟಿದ್ದ ಆಸ್ತಿಯನ್ನು 3 ಮತ್ತು 4 ನೇ ಪ್ರತಿವಾದಿ ನನ್ನ ತಾಯಿಗೆ ಮರಣ ಶಾಸನ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. 3 ರಿಂದ 5 ನೇ ಪ್ರತಿವಾದಿಗಳು ಏನು ಪ್ರತಿವಾದ ಪತ್ರ ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿರುವುದಿಲ್ಲ ಪ್ರತಿವಾದಿಗಳು ತಮ್ಮ ತಕರಾರಿನಲ್ಲಿ ಮರಣ ಶಾಸನದ ಕುರಿತು ತಿಳಿಸಿ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಸದರಿ ವಿಲ್ ನ ರದ್ದತಿಗಾಗಿ ನಾನು ಕೇಳಿರುವುದಿಲ್ಲ.

ದಾವಾ ಐಟಂ.ನಂ.1 ನ್ನು ಕಡಿಮೆ ವಿಸ್ತೀರ್ಣಕ್ಕೆ ತೋರಿಸಿ ನಂತರದಲ್ಲಿ ಅದನ್ನು ಹೆಚ್ಚು ವಿಸ್ತೀರ್ಣಕ್ಕೆ ತಿದ್ದುಪಡಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸರ್ವೇ ನಂ.12/1 ರಲ್ಲಿ

1 ಎಕರೆ 8 ಗುಂಟೆ ಪೈಕಿ 26 ಗುಂಟೆ ಹೊರತು ಪಡಿಸಿ ಉಳಿದ ಜಮೀನು ಪ್ರತಿವಾದಿ 3 ಮತ್ತು 4 ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ನನ್ನ ತಂದೆಯ ಹೆಸರಿನಲ್ಲಿದೆ ಎಂದು ಕಂದಾಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಿಪಿ.1 ರಂತೆ 3 ಮತ್ತು 4 ನೇ ಪ್ರತಿವಾದಿಗಳು ಮತ್ತು ಅವರ ತಾಯಿಯ ಹೆಸರಿಗೆ 22 ಗುಂಟೆಗೆ ಹೆಸರಿರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಅವರು ಫೋರ್ಜರಿ ಮಾಡಿಕೊಂಡಿರಬಹುದು ಎಂದು ನುಡಿಯುತ್ತಾರೆ. ಆ ರೀತಿ ಮೋಸ ಮಾಡಿ ಖಾತೆ ಮಾಡಿಕೊಂಡಿದ್ದಾರೆಂದು ನನ್ನ ವಾದಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ಸದರಿ ವಿಚಾರದ ಬಗ್ಗೆ ನಾವು ಮೇಲ್ಮನವಿ ಸಲ್ಲಿಸಿ ಖಾತೆಯಾದ ಬಗ್ಗೆ ಪ್ರಶ್ನಿಸಿರುವುದಿಲ್ಲ.

3 ಮತ್ತು 4 ನೇ ಪ್ರತಿವಾದಿಗಳಿಗೆ ಸೇರಿದ ಆಸ್ತಿಯನ್ನು ಲಪಟಾಯಿಸಲು ಅವರ ಆಸ್ತಿ ಎಂದು ತೋರಿಸಿ ವಾದ ಪತ್ರ ತಿದ್ದುಪಡಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ . ನನ್ನ ತಂದೆಯ ಭಾಗಕ್ಕೆ 4-5 ಆಸ್ತಿಗಳು ಬಂದಿದ್ದು, ಸದರಿ ಆಸ್ತಿಗಳ ನಂಬರ್ ಮತ್ತು ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆಗೆ ಭಾಗಾಂಶದಲ್ಲಿ ಆಸ್ತಿಗಳು ಬಂದಿದ್ದವು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಈ ಕುರಿತು ನನ್ನ ವಾದಪತ್ರದಲ್ಲಿ ಹೇಳಿಲ್ಲ ಹಾಗೂ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ-ತಂದೆ ಈ ದಾವೆಯನ್ನು ಹೂಡಿದ ನಂತರ ಮರಣ ಹೊಂದಿರುತ್ತಾರೆ.

ನಮ್ಮ ಊರಿನ ಚಿಕ್ಕ ರೇವಣ್ಣನ ಮಗ ದೊಡ್ಡ ರೇವಣ್ಣ ನನಗೆ ಗೊತ್ತು ಎಂದರೆ ಸರಿ. ಸದರಿಯವರಿಗೆ ದಾವಾ ಐಟಂ.ನಂ.3 ನ್ನು ನನ್ನ ತಂದೆ - ತಾಯಿ ಬದುಕಿದ್ದಾಗ ಈ ದಾವೆ ಸಲ್ಲಿಸಿದ ನಂತರ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾರಾಟದ ವೇಳೆಯಲ್ಲಿ ನಾನು, 1 ನೇ ವಾದಿ, 2 ನೇ ಪ್ರತಿವಾದಿ ಮಾರಾಟದ ಹಣವನ್ನು ನಾವೆಲ್ಲ ಹಂಚಿಕೊಂಡಿದ್ದೇವು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ತಿಳಿದ ಪ್ರತಿವಾದಿ 3 ರಿಂದ 5 ರವರು ಪ್ರತಿವಾದ ತಿದ್ದುಪರಿಗಾಗಿ ಅರ್ಜಿ ಸಲ್ಲಿಸಿ ಸದರಿ ಮಾರಾಟದ ಕ್ರಯ ಪತ್ರವನ್ನು ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ನಮ್ಮ ವಕೀಲರಿಂದ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ತಾವು ಯಾವುದೇ ಹಣವನ್ನು ಹಂಚಿಕೊಂಡಿಲ್ಲ ಆದ್ದರಿಂದ ನಾವು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಎಲ್ಲಾ ವಿಚಾರಗಳು ತಿಳಿದಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಣ ಹಂಚಿಕೊಂಡ ಕಾರಣ ಸದರಿ ಕ್ರಯ ಪತ್ರದ ರದ್ದತಿಗಾಗಿ ಕೇಳಿಲ್ಲ ಎಂದರೆ ಸಾಕ್ಷಿಯು ತಾವು ಹಣ ಹಂಚಿಕೊಂಡಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.